ಮತ್ತೆ ಇವರು ರೆಫರೆನ್ಸ್ ಏಕೆ ಮಾಡಬೇಕು?

ಶ್ರೀ ಎಂ.ಸಿ.ನಾಣಯ್ಯ: ಇದರ ಪ್ರೊಸೀಜರ್ ಎಂದರೆ ಇದು ಮೊದಲು ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಹೋಗಬೇಕು. Government of India in turn writes to the CBI. ನಂತರ ಫಾರ್ಮಲ್ ಕಂಪ್ಲೇಂಟ್ ಲಾಡ್ಜ್ ಮಾಡಲಿಕ್ಕೆ ಹೇಳುತ್ತಾರೆ. So we are lodging a formal complaint. ಅವರು ದೊಡ್ಡ ಕೋಆಪರೇಟರ್. ನೀವು ಒಂದು ದೊಡ್ಡ ಸಂಸ್ಥೆಗೆ ಪ್ರೆಸಿಡೆಂಟ್ ಅಲ್ವಾ?

ಶ್ರೀ ಹಚ್.ಶಿವಪ್ಪ: ಅದಕ್ಕೋಸ್ಕರವೇ ನಾನು ಕೇಳಿದ್ದು. ಈಗ ನನ್ನ ಡಿಫಿಶಿಯನ್ಸಿ ಏನಾದರೂ ಇದ್ದರೆ ಅದನ್ನು ಭರ್ತಿ ಮಾಡುವುದಕ್ಕೆ ನಾನು ಅವರಲ್ಲಿ ಕ್ಲಾರಿಫಿಕೇಶನ್ ಕೇಳುವುದು.

ಶ್ರೀ ಎಂ.ಸಿ.ನಾಣಯ್ಯ: ಆ ಶಕ್ತಿ ಅವರಿಗೆ ಇರಬಹುದು, ನನಗೆ ಇಲ್ಲಪ್ಪ.

ವಿಷಯ: ತೋಟಗಾರಿಕಾ ಉತ್ಪನ್ನಗಳ ರಫ್ತು

264 ( 1588)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ತೋಟಗಾರಿಕೆ ಉತ್ಪನ್ನಗಳನ್ನು ರಫ್ತು ಮಾಡಲು ಹಾಗೂ ಯೋಗ್ಯ ಬೆಲೆ ಸಿಗುವಂತೆ ಮಾಡಲು ರಾಜ್ಯ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ. ರಾಜ್ಯದ ತೋಟಗಾರಿಕೆ ಉತ್ಪನ್ನಗಳನ್ನು ರಫ್ತು ಮಾಡಲು ಹಾಗೂ ಯೋಗ್ಯಬೆಲೆ ಸಿಗುವಂತೆ ಮಾಡಲು ಸರ್ಕಾರವು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮವನ್ನು ಸ್ಥಾಪಿಸಿದ್ದು, ಅದು ಕಾರ್ಯಪ್ರವೃತ್ತವಾಗಿದೆ. ಇಲ್ಲಿಯವರೆಗೆ 90 ಟನ್ ದ್ರಾಕ್ಷಿಯನ್ನು ಯೂರೋಪ್ ಮತ್ತು ಕೂಲ್ಲಿ ರಾಷ್ಟ್ರಗಳಿಗೆ ರಫ್ತು ಮಾಡಲಾಗಿದೆ. ದ್ರಾಕ್ಷಿ ಅಲ್ಲದೆ ಮಾವು, ದಾಳಿಂಬೆ, ನುಗ್ಗೆ, ಕಲ್ಲಂಗಡಿ, ಮತ್ತು ಮಸೂರ್ ಬೆಳೆಯನ್ನು ಸಿಂಗಾಪುರ ಹಾಗೂ ಕೂಲ್ಲಿ ರಾಷ್ಟ್ರಗಳಿಗೆ ಕೆಪೆಕ್ ಸಂಸ್ಥೆಯು ರಫ್ತು ಮಾಡಲಿದೆ. ಕೆಪೆಕ್ ಸಂಸ್ಥೆಯು ಶ್ರೀಲಂಕಾ ದೇಶಕ್ಕೆ 533.375 ಟನ್ ಆಲೂಗೆಡ್ಡೆಯನ್ನು ರಫ್ತು ಮಾಡಿದೆ. ರಾಜ್ಯದಲ್ಲಿ ಬೆಳೆಯುವ ಕೃಷಿ ಉತ್ಪನ್ನಗಳ (ತೋಟಗಾರಿಕೆ ಮತ್ತು ಪುಷ್ಪಸೇರಿ) ಆಧಾರದ ಮೇಲೆ ಹಾಗೂ ಮುಂದೆ ಬೆಳೆಯಬಹುದಾದ ಬೆಳೆಗಳ ಆಧಾರದ ಮೇಲೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಹಾಗೂ ನಿರ್ವಹಿಸುವವರಿಗೆ

ಉತ್ತೇಜಿಸಲು ನಿಗಮವು ಸಮಗ್ರ ಯೋಜನೆಯನ್ನು ಸಿದ್ಧಪಡಿಸಿದ್ದು, ಯೋಜನೆಯ ಅಂದಾಜು ವೆಚ್ಚ 230 ಕೋಟಿ. ರೂ.ಗಳು. ಈ ಹಣವನ್ನು ಕೆಪೆಕ್ ಸಂಸ್ಥೆಗೆ ಸರ್ಕಾರವು ಹಂತ ಹಂತವಾಗಿ ನೀಡಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿ ತೋಟಗಾರಿಕೆ ಉತ್ಪನ್ನಗಳನ್ನು ಬೆಳೆಯುವ ಬೆಳೆಗಾರರಿಗೆ ಸಹಾಯ ಮಾಡಲಾಗುವುದು. ಇದಲ್ಲದೆ ಹಾಪ್‌ಕಾಮ್ಸ್ ಸಂಸ್ಥೆಯವರು ಕೂಡ ವಿವಿಧ ತೋಟಗಾರಿಕೆ ಬೆಳೆಗಳಾದ ಮಾವು, ನುಗ್ಗೆ ಕಲ್ಲಂಗಡಿ ಮತ್ತು ಇತರೆ ಪದಾರ್ಥಗಳನ್ನು ಹೊರ ದೇಶಗಳಾದ ಸಿಂಗಾಪುರ, ಕೆನಡಾ ಮಾಲ್ಡೀವ್ಸ್ ಮತ್ತು ಅಬುದಾಬಿಗೆ ರಫ್ತು ಮಾಡಲಾಗುತ್ತಿದೆ. ತೋಟಗಾರಿಕೆ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗುವಂತೆ ಮಾಡಲು ಮುಖ್ಯವಾಗಿ ಮಾರಾಟದ ಮೂಲ ಸೌಲಭ್ಯಗಳಾದ ಸಂಗ್ರಹಣೆ, ಶೇಖರಣೆ, ಸಂಸ್ಕರಣೆ, ಶೀತಲಗೃಹ ಮಾರಾಟ ಮಳಿಗೆಗಳು, ಪ್ಯಾಕಿಂಗ್ ಘಟಕಗಳು, ವಾಹನಗಳು, ಇತ್ಯಾದಿ ಅವಶ್ಯಕವಾಗಿರುತ್ತದೆ. ಇವುಗಳನ್ನು ಸಹಕಾರ ವಲಯದಡಿ ನಿರ್ಮಿಸಲು ಕೆಹೆಚ್‌ಎಫ್ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಕೆಹೆಚ್‌ಎಫ್ ಸಂಸ್ಥೆಯು ಪೂರ್ಣ ಪ್ರಮಾಣದಲ್ಲಿ ಸಧ್ಯದಲ್ಲೆ, ಕೆಲಸ ಮಾಡಲು ಸಾಧ್ಯವಾಗುತ್ತದೆ. ತೋಟಗಾರಿಕೆ ಉತ್ಪನ್ನಗಳಿಗೆ ಯೋಗ್ಯ ಬೆಳೆ ದೊರಕಿಸುವುದು ಸಾಧ್ಯವಾಗುತ್ತದೆ.

ಶ್ರೀ ಎನ್.ಯೋಗೀಶ್ ಭಟ್: ಸನ್ಮಾನ್ಯ ಉಪಾಧ್ಯಕ್ಷರೇ ಈ ಕೆಪೆಕ್ ಸಂಸ್ಥೆಗೆ 230 ಕೋಟಿ ರೂಪಾಯಿಗಳನ್ನು ಪ್ರೋತ್ಸಾಹಕ್ಕೋಸ್ಕರ ಸರ್ಕಾರ ಹಂತ ಹಂತವಾಗಿ ನೀಡಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವ ಬಗ್ಗೆ ಯೋಜನೆಯನ್ನು ಮಾಡಲಾಗಿದೆ ಎಂದು ಹೇಳಿ ಉತ್ತರವನ್ನು ಕೂಡಲಾಗಿದೆ. ಈ ಕೆಪೆಕ್ ಸಂಸ್ಥೆ ಕಳೆದ ಎರಡು ವರ್ಷದಲ್ಲಿ ತೋಟಗಾರಿಕೆ ಉತ್ಪನ್ನಗಳನ್ನು ಎಷ್ಟು ರಫ್ತು ಮಾಡಿದೆ? ಅದಕ್ಕೆ ತಾವು ಸ್ಪಷ್ಟೀಕರಣವನ್ನು ಕೂಡಬೇಕು. ಅದರ ಜೊತೆಯಲ್ಲಿ ಎರಡನೆಯದಾಗಿ ಖಾಸಗೀಯವರಿಗೆ ಇದೇ ರೀತಿಯಾಗಿ ಪ್ರೋತ್ಸಾಹ ಕೊಟ್ಟಲ್ಲಿ, ಅವರಿಗೆ ಹೆಚ್ಚು ರಫ್ತು ಮಾಡುವುದಕ್ಕೆ ಸಾಧ್ಯ ಇರುವುದರಿಂದ ಈ ನಿಟ್ಟಿನಲ್ಲಿ ಅವರಿಗೆ ಸಹಾಯ ಮಾಡುವುದಕ್ಕೆ ಇಚ್ಚಿಸುತ್ತಿದ್ದೀರೋ? ಈ ವಿವರಗಳನ್ನು ತಾವು ಕೂಡಬೇಕು.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಕೃಷಿ ಸಚಿವರು ಭಾರತ ದೇಶದಲ್ಲಿ, ಕರ್ನಾಟಕದಲ್ಲಿಯೇ ಮೊಟ್ಟಮೊದಲಬಾರಿಗೆ ಮಾದರಿ ಕೃಷಿ ನೀತಿಯನ್ನು ತಂದಮೇಲೆ, ನಮ್ಮ ತೋಟಗಾರಿಕಾ ಉತ್ಪನ್ನಗಳಾದ ಹಣ್ಣು, ತರಕಾರಿ, ಹೂವುಗಳನ್ನು ರಫ್ತು ಮಾಡಿ, ನಮ್ಮ ರೈತರಿಗೆ ಹೆಚ್ಚು ಬೆಲೆ ಕೊಡುವುದಕ್ಕೆ ಮತ್ತು ಅವರಿಗೆ ಯೋಗ್ಯ ಮಾರುಕಟ್ಟೆ ವ್ಯವಸ್ಥೆ ಮಾಡಬೇಕೆಂದು, ಕೆಫೆಕ್ ಅಂದರೆ ಕರ್ನಾಟಕ ಸ್ಟೇಟ್ ಅಗ್ರಿಕಲ್ಚರ್ ಪ್ರೊಡ್ಯೂಸರ್ ಪ್ರೋಸೆಸಿಂಗ್ ಅಂಡ್ ಎಕ್ಸ್‌ಪೋರ್ಟ್ ಕಾರ್ಪೊರೇಷನ್ ಲಿಮಿಟೆಡ್‌ನ್ನು ಹೊಸದಾಗಿ ಮಾಡಿ, ಅದಕ್ಕೆ 230 ಕೋಟಿ ರೂಪಾಯಿಗಳ ಬಂಡವಾಳವನ್ನು ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿ, ಹಂತ ಹಂತವಾಗಿ ಅದಕ್ಕೆ ದುಡ್ಡನ್ನು ಕೊಡುತ್ತಿದ್ದಾರೆ. ಅದು ಈಗಾಗಲೇ ಸುಮಾರು 250 ಟನ್ ಎಕ್ಸ್‌ಪೋರ್ಟ್ ಮಾಡಿದೆ. ಇಂಪೋರ್ಟ್

ಮತ್ತು ಎಕ್ಸ್‌ಪೋರ್ಟ್‌ಗೆ ಏನೇನು ಕಾನೂನುಗಳು ಬೇಕೋ ಅದನ್ನು ಪಡೆದುಕೊಂಡಿದೆ. ಇದು ಕೇವಲ ಎರಡು ವರ್ಷಗಳಲ್ಲಿ ಆಗಿರತಕ್ಕಂಥಾದ್ದು. ಇಂತಹ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ, ನೀವು ನಮಗೆ ಪ್ರಶಂಸೆಯನ್ನು ಕೊಡಬೇಕು. ಈಗಾಗಲೇ ಯೂರೋಪ್ ಮತ್ತು ಜರ್ಮನಿ ದೇಶಗಳಿಗೆ ಜಂಟಿಯಾಗಿ ಸುಮಾರು 90 ಟನ್‌ಗಿಂತ ಹೆಚ್ಚಿಗೆ ದ್ರಾಕ್ಷಿಯನ್ನು ರಫ್ತು ಮಾಡಿದ್ದೇವೆ. ಮತ್ತೆ ಸಿಂಗಪುರ ಮತ್ತು ದುಬಾಯಿ ಇಲ್ಲಿಗೂ ಕೂಡ ಈ ಸಾರಿ ಈ ಸಂಸ್ಥೆಯಿಂದ ರಫ್ತು ಮಾಡಬೇಕೆಂಬ ಯೋಜನೆಯನ್ನು ಹಾಕಿದ್ದೇವೆ. ಇದು ಹಂತ ಹಂತವಾಗಿ ನಡೆಯತಕ್ಕಂಥದ್ದು. ಇದರ ಜೊತೆಗೆ 5ನೇ ತಾರೀಖು ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್‌ನ ಲಾಂಚಿಂಗ್ ಪ್ರೋಗ್ರಾಂ ಕೂಡ ಮಾಡುತ್ತಿದ್ದೇವೆ. ಇದೇ ಕೃಷಿ ಉತ್ಪನ್ನಗಳು ಅದಕ್ಕೆ ಬೇಕಾದ ಸಂಗ್ರಹಣೆ, ಸಾಗಾಣಿಕೆ, ಸಂರಕ್ಷಣೆ, ಸಂಸ್ಕರಣೆ, ಪ್ಯಾಕಿಂಗ್, ಮಾರ್ಕೆಟ್, ಎಕ್ಸ್‌ಪೋರ್ಟ್ ಮತ್ತು ಡೊಮ್ಯಾಸ್ಟಿಕ್ ಇವೆಲ್ಲವನ್ನೂ ಮಾಡುವುದಕ್ಕೆ ಮಾಡುತ್ತಿದ್ದೇವೆ. ಇವೆಲ್ಲದರ ಮೂಲ ಉದ್ದೇಶ ರೈತರು ಬೆಳದಂಥ ತೋಟಗಾರಿಕಾ ಉತ್ಪನ್ನಗಳಿಗೆ ಉತ್ತಮವಾದ ಮಾರ್ಕೆಟ್ ಕೊಡತಕ್ಕಂಥಾದ್ದು ಮತ್ತು ಯೋಗ್ಯ ಬೆಲೆಯನ್ನು ಕೊಡತಕ್ಕಂತಾದ್ದು. ಈ ದೃಷ್ಟಿಯಿಂದ ನಾವು ಮಾಡುತ್ತಿದ್ದೇವೆ. 5ನೇ ತಾರೀಖಿನ ಸಭೆಗೆ ತಮಗೂ ಕೂಡ ಆಹ್ವಾನ ಪತ್ರಿಕೆ ಕಳುಹಿಸುತ್ತೇವೆ, ತಾವು ಆ ಸಮಾರಂಭಕ್ಕೆ ಬರಬೇಕು. ಮೊಟ್ಟಮೊದಲ ಬಾರಿಗೆ 50 ವರ್ಷಗಳ ನಂತರ ಕರ್ನಾಟಕದಲ್ಲಿ ಉತ್ತಮ ಕೆಲಸ ಮಾಡಿರುವುದರಿಂದ, ರೈತರಿಗೆ ಉಪಯುಕ್ತವಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಸ್.ಯೋಗೀಶ್ ಭಟ್: ಯಾವುದೇ ವಿದೇಶಿ ಸಂಸ್ಥೆಗಳ ಒಟ್ಟಿಗೆ ಮಾರ್ಕೆಟಿಗೆ ಸಂಬಂಧಪಟ್ಟಂತೆ ಏನಾದರೂ ಅಗ್ರಿಮೆಂಟ್ ಆಗಿದೆಯೇ? ಒಂದು ವೇಳೆ ಆಗಿದ್ದರೆ ಆ ವಿವರಗಳನ್ನು ತಿಳಿಸಬೇಕು. ಇದೇರೀತಿ ಮಂಗಳೂರು ರಫ್ತು ಉದ್ಯಮ ಘಟಕವನ್ನು ಆರಂಭ ಮಾಡುವ ದೃಷ್ಟಿಯಿಂದ ತಾವು ಏನಾದರೂ ಕಾರ್ಯಕ್ರಮ ಹಾಕಿದ್ದೀರೋ?

ಶ್ರೀ ಡಿ.ಟಿ.ಜಯಕುಮಾರ್: ಈ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ, ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಮಾಡುವುದಕ್ಕೆ ನಮಗೆ ಅಧಿಕಾರ ಇದೆ. ಬೇರೆಯವರ ಜೊತೆ ನಾವೇಕೆ ಶಾಮೀಲಾಗಬೇಕು. ಅಕಸ್ಮಾತ್ ಪ್ರೈವೇಟ್‌ನವರು ಮಾಡುವುದಾದರೆ ಮಾಡಬಹುದು. ಆದರೆ, ಸರ್ಕಾರದ ನೀತಿಯಂತೆ ಕೆಫೆಕ್ ಸಂಸ್ಥೆಯನ್ನು ಮಾಡಿ, ನಾವೇ ನೇರವಾಗಿ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಲೈಸೆನ್ಸ್ ಪಡೆದುಕೊಂಡಿದ್ದೇವೆ. ನಾವೇ ನೇರವಾಗಿ ಬೇರೆ ದೇಶಗಳಿಗೆ ಕಳುಹಿಸುತ್ತೇವೆ. ಬೇರೆ ಕಂಪನಿಗೆ ಶಾಮೀಲಾಗಬೇಕಾದದ್ದು ಇಲ್ಲ.

ಶ್ರೀ ಎನ್.ಯೋಗೀಶ್ ಭಟ್: ಬೇರೆ ದೇಶಗಳೊಟ್ಟಿಗೆ ತಾವು ವ್ಯವಹಾರ ಮಾಡುವ ನಿಟ್ಟಿನಲ್ಲಿ ತಾವು ಏನು ಅಗ್ರಿಮೆಂಟ್ ಮಾಡಿಕೊಂಡಿದ್ದೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಡಿ.ಟಿ.ಜಯಕುಮಾರ್: ಈಗಾಗಲೇ ನಾವು ಕಳುಹಿಸುತ್ತಿದ್ದೇವೆ, ಅಗ್ರಿಮೆಂಟ್

ಮಾಡಿಕೊಳ್ಳಬೇಕಾದ್ದು ಇಲ್ಲ. ಎಕ್ಸ್‌ಪೋರ್ಟ್ ನಿಯಮಗಳ ಪ್ರಕಾರ ಬೇರೆ ಸಂಸ್ಥೆಗಳಿಗೆ ಕಳುಹಿಸುವುದಕ್ಕೆ ನಿಯಮಗಳು ಇವೆ. ನಾವು ಈಗಾಗಲೇ ಬೇರೆ ದೇಶಕ್ಕೆ ಕಳುಹಿಸಿದ್ದೇವೆ. ಈಗಾಗಲೇ 90 ಟನ್ ದ್ರಾಕ್ಷಿ ಮತ್ತು 250 ಟನ್ ಆಲೂಗೆಡ್ಡೆಯನ್ನು ಕಳುಹಿಸಿದ್ದೇವೆ.

ಶ್ರೀ ಎನ್.ಯೋಗೀಶ್ ಭಟ್: ಮಂಗಳೂರು ರಫ್ತು ಉದ್ಯಮ ಘಟಕ ಆರಂಭ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಏಕೆಂದರೆ, ತಾವು ಮಂಗಳೂರಿನಲ್ಲಿ ಈ ರಫ್ತು ಉದ್ಯಮ ಘಟಕವನ್ನು ಆರಂಭ ಮಾಡುತ್ತೇವೆಂದು ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದೀರಿ. ತಾವು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಡಿ.ಟಿ.ಜಯಕುಮಾರ್: ಮಂಗಳೂರು ಘಟಕದ ಬಗ್ಗೆ ಮಾಹಿತಿ ಇಲ್ಲ, ಬೇಕಾದರೆ ಅವರಿಗೆ ತರಿಸಿಕೊಡುತ್ತೇನೆ.

ವಿಷಯ: ಬೀಜಗಳ ಪೂರೈಕೆ ಮೇಲೆ ಸಹಾಯಧನ

261 (1577)

ಡಾ: ಎಂ.ಸಿ.ಕರ್ಕಿ (ಕುಮುಟಾ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀಜಗಳ ಪೂರೈಕೆಯ ಮೇಲೆ ಸರಕಾರ ಸಬ್ಸಿಡಿ ನಿಲ್ಲಿಸಿರುವುದಕ್ಕೆ ಕಾರಣಗಳೇನು?

ಆ) ಹೊಸ ತಳಿಗಳು ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ ತಾಲ್ಲೂಕುಗಳಲ್ಲಿ ಯೋಗ್ಯವಿಲ್ಲದಿರುವುದರಿಂದ ರೈತರಿಗೆ ಕೊಡುವ ಸಬ್ಸಿಡಿ ವಿಳಂಬವಾಗುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಬೀಜವನ್ನು ಪರ್ಯಾಯವಾಗಿ ಒದಗಿಸಿದರೆ ಸರ್ಕಾರಕ್ಕೆ ಆಗುವ ನಷ್ಟವೇನು?

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು):

ಅ) ಸಬ್ಸಿಡಿ ನಿಲ್ಲಿಸಿರುವುದಿಲ್ಲ.

ಆ) ಉತ್ತರ ಕನ್ನಡ ಜಿಲ್ಲೆಯ ಕುಮಟಾ ಮತ್ತು ಹೊನ್ನಾವರ ತಾಲ್ಲೂಕುಗಳ ರೈತರು ಮುಂಗಾರು ಹಂಗಾಮಿನಲ್ಲಿ ಕಳೆದ 10 ವರ್ಷಗಳ ಮೊದಲು ಬಿಡುಗಡೆಯಾದ ಭತ್ತದ ತಳಿಗಳನ್ನೇ ಬೆಳೆಯುತ್ತಿರುವುದರಿಂದ ಈ ತಳಿಗಳ ಬಿತ್ತನೆ ಬೀಜಕ್ಕೆ ರಿಯಾಯಿತಿ ಇರುವುದಿಲ್ಲ. ಆದರೆ ಈ ಭಾಗದ ರೈತರು ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ